<u>ದಿನಾಂಕಃ 16-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ- 1 ನೇ ಪ್ರತಿವಾದಿ ಪರ ವಕೀಲರಿಂದಃ-</u>

ನಾನು ಎಂ.ಕಾಂ, ಸಿ.ಎ, ಐ.ಐ.ಬಿ. ಓದಿರುತ್ತೇನೆ. ನಾನು ಕಾಫಿ ಎಸ್ಟೇಟ್ ನ ಮಾಲೀಕನಾಗಿರುತ್ತೇನೆ. ನಾನು ವಿಜಯ ಬ್ಯಾಂಕ್ ನಲ್ಲಿ ಎಕ್ಸಿಕ್ಯೂಟೀವ್ ಆಗಿ ನಿವೃತ್ತನಾಗಿರುತ್ತೇನೆ. ನಾನು ಆ್ಯಂಜಿಲೋರ್ ಎಸ್ಟೇಟ್ ನ ಪಾಲುದಾರರಲ್ಲಿ ಒಬ್ಬನಾಗಿರುತ್ತೇನೆ ಎಂದರೆ ಸರಿ. ನಾನು ನನ್ನ ದಾವಾ ಪತ್ರದಲ್ಲಿ ಆ್ಯಂಜಿಲೋರ್ ಎಸ್ಟೇಟ್ ನ ಬಗ್ಗೆ Dissolution of Partnership Firm ಬಗ್ಗೆ ಪಾರ್ಥಿಸಿರುತ್ತೇನೆ ಎಂದರೆ ಸರಿ. ನಾನು ಸದರಿ M/s Anjelore Partnership Firm ಅನ್ನು  ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ದಾವಾ ಆಸ್ತಿಗಳು M/s Anjelore Estate ನ ಆಸ್ತಿಗಳು ಎಂದರೆ ಸಾಕ್ಷಿದಾರರು ದಾವಾ ಹಾಕುವ ಸಮಯದಂದು ಸದರಿ ಆಸ್ತಿಗಳು M/s Anjelore Estate ನ ಆಸ್ತಿಗಳು ಆಗಿರಲಿಲ್ಲ ಎಂದು ನುಡಿಯುತ್ತಾರೆ.

ನಿಪಿ-15 ದಿಃ21.12.1990 ರ ಅಗ್ರಿಮೆಂಟ್ ನ ಪ್ರಕಾರ ನಾನು ದಾವಾ ಆಸ್ತಿಗಳು ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ Partnership Firm ನ ಆಸ್ತಿಗಳು ಅಲ್ಲ ಎಂದು ಹೇಳುತ್ತಿದ್ದೇನೆ. ನಾನು ನಿಪಿ-15 ರ ಆಧಾರದ ಮೇಲೆ ಯಾವುದೇ Specific Performance of Agreement ದಾವೆಯನ್ನು ಸಲ್ಲಿಸಿರುವುದಿಲ್ಲ. ದಾವಾ ಬಿ ಶೆಡ್ಯೂಲ್ ಆಸ್ತಿಯ ಬಗ್ಗೆ ಹಿಂದೆ ಯಾವುದೇ ವಿವಾದ ಇರುವುದಿಲ್ಲ. ದಾವಾ ಬಿ ಶೆಡ್ಯೂಲ್ ಆಸ್ತಿಯು ಮಸಗಳಿ Reserved

Forest ನ ಭಾಗವಾಗಿರುತ್ತದೆ ಮತ್ತು ಕರ್ನಾಟಕ ಸರ್ಕಾರವು ಅದನ್ನು Reserved Forest ಎಂದು Claim ಮಾಡುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಚಿಕ್ಕಮಗಳೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಇರುವ ಆರ್.ಎ.217/2011 ರಲ್ಲಿ ನಾನು ಪಕ್ಷಗಾರನಾಗಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪೀಲು ಪುರಸ್ಕೃತಗೊಂಡಿದ್ದು ಅದರಲ್ಲಿ ಈ ದಾವೆಯ ಬಿ ಶೆಡ್ಯೂಲ್ ಆಸ್ತಿಯು Reserved Forest ಎಂದು ಪರಿಗಣಿಸಲ್ಪಟ್ಟಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪೀಲಿನಲ್ಲಿ ಆದ ತೀರ್ಪಿನ ವಿರುದ್ಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಆರ್.ಎಸ್.ಎ ನಂ.869/2014 ರಂತೆ ಅಪೀಲು ಬಾಕಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪೀಲಿನಲ್ಲಿಯೂ ನಾನು ಪಕ್ಷಗಾರನಾಗಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ.

2005 ನೇ ಇಸವಿಯಲ್ಲಿ Conservator of Forest, Chikkamagaluru Circle ರವರು ಈ ದಾವೆಯ ಬಿ ಶೆಡ್ಯೂಲ್ ಆಸ್ತಿಯ ಬಗ್ಗೆ ಅಪೀಲ್ ನಂ.47/2004 ರಲ್ಲಿ Eviction Order ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ಮತ್ತು ನಿಪಿ-15 ಕಾನೂನುಬಾಹಿರವಾದ ದಾಖಲೆಗಳು ಎಂದರೆ ಸರಿಯಲ್ಲ. ನನಗೂ ಹಾಗೂ ನನ್ನ ಸಹೋದರರಿಗೂ ದಾವಾ ಬಿ ಶೆಡ್ಯೂಲ್ ಆಸ್ತಿಯ ಬಗ್ಗೆ Claim ಮಾಡುವಂತಹ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು Partnership Deed ನ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ದಿಃ29.12.1984 ರ Reconstitution of Partnership Deed ನಲ್ಲಿ ಯಾವುದೇ ಪಾಲುದಾರರಿಗೆ ನೋಟೀಸ್ ನೀಡಿ Partnership Firm ಅನ್ನು Dissolve ಮಾಡುವಂತಹ ಅಧಿಕಾರ

ಅಥವಾ ಸ್ವಾತಂತ್ರ್ಯ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ Deed ನ ಪ್ರಕಾರ ಪಾಲುದಾರರು 3 ತಿಂಗಳ ನೋಟೀಸ್ ಅನ್ನು ನೀಡಿ ನಿವೃತ್ತಿಯಾಗಲು ಮಾತ್ರ ಅಧಿಕಾರ ಇದೆಯೇ ಹೊರತು Partnership Firm ಅನ್ನು Dissolve ಮಾಡಲು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ನಾನು ಪ್ರತಿವಾದಿಯರಿಗೆ ನೋಟೀಸ್ ಅನ್ನು ನೀಡಿರುತ್ತೇನೆ. ಸದರಿ ನೋಟೀಸ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೋ ಇಲ್ಲವೋ ಎಂದು ಹೇಳಲು ನನಗೆ ನೆನಪಿಲ್ಲ. ನಾನು ಪ್ರತಿವಾದಿಯರಿಗೆ ನೀಡಿದ ನೋಟೀಸ್ ನ ಬಾಬ್ತು ಒಬ್ಬರು ಪ್ರತಿವಾದಿ ತನ್ನ ವಕೀಲರ ಮೂಲಕ ಉತ್ತರವನ್ನು ನೀಡಿರುತ್ತಾರೆ. ನಾನು ನೀಡಿದ ನೋಟೀಸ್ ನಲ್ಲಿ Partnership Firm ಅನ್ನು ಅಗ್ರಿಮೆಂಟ್ ನ ಪ್ರಕಾರ Dissolve ಮಾಡಲಾಗುತ್ತದೆ ಎಂದು ತಿಳಿಸಿರುತ್ತೇನೆ. Partnership Firm ಅಸ್ತಿತ್ವದಲ್ಲಿ ಇರುವ ತನಕ ಯಾವುದೇ ಪಾಲುದಾರರು ದಾವಾ ಆಸ್ತಿಗಳ ಬಾಬ್ತು Exclusive and Individual Rights Claim ಮಾಡಲು ಬರುವುದಿಲ್ಲ ಎಂದರೆ ಸರಿ.

ಸಾಕ್ಷಿದಾರರಿಗೆ ದಿಃ20.10.2021 ರ ನೋಟೀಸ್ ನ ಪ್ರತಿಯನ್ನು ತೋರಿಸಿ ಸದರಿ ನೋಟೀಸ್ ನಾನು ನನ್ನ ವಕಿಲರ ಮೂಲಕ ಪ್ರತಿವಾದಿಯರಿಗೆ ಕಳುಹಿಸಿದ ನೋಟೀಸ್ ಎಂದು ಕೇಳಲಾಗಿ ಸಾಕ್ಷಿಯು ಒಪ್ಪಿಕೊಂಡಿದ್ದರಿಂದ ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ‘You are hereby informed that the Partnership Firm under the name and Style of Anjelore Estate is hereby dissolved as per the

duration clause of 3 months as per the Deed of Partnership dated 01.07.1983' ಎಂದು ಇರುತ್ತದೆ ಎಂದರೆ ಸರಿ. ಅದರ ಪ್ರಕಾರ ನಾನು ನೀಡಿದ ನೋಟೀಸ್ ನಲ್ಲಿ Partnership Firm ಅನ್ನು Dissolve ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ದಾವೆಯ ಪ್ಯಾರಾ ನಂ.13 ರ ಕೊನೆಯಲ್ಲಿ 'The Plaintiff and Defendants are enjoying their respect shares as per Agreement dated 21.12.1990 and as per Will dated 28.12.1990' ಎಂದು ಕೈ ಬರಹದಲ್ಲಿ ಬರೆಯಲಾಗಿದೆ ಎಂದರೆ ಸರಿ. ಸದರಿ ವಾಕ್ಯದ ಪ್ರಕಾರ ನಾನು ಈ ದಾವೆಯಲ್ಲಿ ಕೇಳಿದಂತಹ Prayer (b) ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

(1 ನೇ ಪ್ರತಿವಾದಿ ಪರ ವಕೀಲರು ತಾವು ಗೆಜೆಟ್ ನೋಟೀಫಿಕೇಷನ್ ಹಾಗೂ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಇದ್ದಂತಹ ಆರ್.ಎ. ನಂ.217/2011 ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವಂತಹ ಆರ್.ಎಸ್.ಎ ನಂ.869/2014 ರ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಪಡೆದುಕೊಂಡು ನಂತರ ಮುಂದುವರಿದ ಪಾಟೀ ಸವಾಲನ್ನು ಮಾಡಲು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಓ.ಎಸ್.ನಂಃ 40/2022
ಪಿ.ಡಬ್ಲ್ಯೂಃ 1

ಎಸ್ಆರ್ಃ

ಓ.ಎಸ್.ನಂಃ 40/2022
ಪಿ.ಡಬ್ಲ್ಯೂಃ 1